# ಹಸಿರು ಗಾಜಿನ ಬಳೆಗಳೆ...

**ಹಬ್ಬಕ್ಕೂ ಗಾಜಿನ ಬಳೆಗೂ ಅನನ್ಯ ನಂಟು. ವರಮಹಾಲಕ್ಷ್ಮಿ ಹಬ್ಬಕ್ಕೆ ಬಳೆಯನ್ನೂ ಸೇರಿದಂತೆ ಮುತ್ತೈದೆಯರಿಗೆ ಬಾಗಿನ ನೀಡುವುದು ವಾಡಿಕೆ. ಹೆಣ್ಣುಮಕ್ಕಳ ಬಳೆಗಳ ಮೇಲಿನ ಪ್ರೇಮ, ಲಕ್ಷ್ಮಿ ಹಬ್ಬದೊಂದಿಗೆ ತಳುಕು ಹಾಕಿಕೊಂಡು ಹಬ್ಬದ ಸಂಭ್ರಮವನ್ನು ಇಮ್ಮಡಿಸಿದೆ.**

■ ದಿವ್ಯಶ್ರೀ ಹೆಗಡೆ

ವರಮಹಾಲಕ್ಷ್ಮಿ ಹಬ್ಬ ಕಳೆಕಟ್ಟಿದೆ. ಬಳೆ, ಅರಿಶಿನ ಕುಂಕುಮ, ಹೂವು ಹಣ್ಣು, ತಾಂಬೂಲ ಹಬ್ಬಕ್ಕೆ ಬೇಕೇ ಬೇಕು. ಗಾಜಿನ ಬಳೆಗಳೂ ವರಮಹಾಲಕ್ಷ್ಮಿ ಹಬ್ಬದ ಪ್ರಮುಖ ಆಕರ್ಷಣೆ. ಅದರಲ್ಲೂ ಹಸಿರು ಬಳೆಗಳೇ ಈ ಹಬ್ಬದ ಪ್ರಧಾನ ದ್ರವ್ಯ.

ಬಳೆಗಳೆಂದರೆ ಹೆಣ್ಣುಮಕ್ಕಳಿಗೆ ಹುಚ್ಚು ಪ್ರೇಮ. ಹಸಿರು, ಕೆಂಪು ಬಳೆಗಳ ಮೇಲೆ ಹೆಣ್ಣುಮಕ್ಕಳಿಗೆ ಎಲ್ಲಿಲ್ಲದ ಮೋಹ. ಕೈ ತುಂಬ ಬಳೆಗಳು ಫಲ್ ಫಲ್ ಎನ್ನುತಿರಲು ಮನೆ, ಮನಗಳಲ್ಲೇನೋ ಹೊಸತನ. 'ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹನು' ಎಂಬ ಕೆ.ಎಸ್. ನರಸಿಂಹಸ್ವಾಮಿಯವರ ಹಾಡು ಇಂದಿಗೂ ಜನಪ್ರಿಯ. ಇಂತಹ ಸುಮಧುರ ಹಾಡುಗಳಲ್ಲಿ ಬಿತ್ತರವಾಗುವ ಅಂಶಗಳು ಬಳೆಗಳ ವಿಶೇಷತೆಯನ್ನು ತಿಳಿಸುತ್ತವೆ.

ಬಳೆಗಳಿಗೆ ಹೆಚ್ಚು ಜೀವಕಳೆ ಬರುವುದು ಹಬ್ಬಗಳ ಸಂದರ್ಭಗಳಲ್ಲಿ. ಆಗಂತೂ ಹೆಂಗಳೆಯರ ಕೈ ತುಂಬಾ ಬಳೆ ಹಾಕಿಕೊಳ್ಳುವ ಸಡಗರವೇ ಬೇರೆ. ಬಣ್ಣದ ಬಟ್ಟೆ ಅದಕ್ಕೆ ಹೊಂದುವಂತಹ ಬಳೆಗಳನ್ನು ಆಸ್ಥೆಯಿಂದ ತೊಡುವ ಹೆಣ್ಣುಮಕ್ಕಳಿಗೆ ಹಬ್ಬಗಳು ಬಂತೆಂದರೆ ಮತ್ತೂ ಖುಷಿಯೇ ಸರಿ. ಅದರಲ್ಲಿಯೂ ಹಸಿರು ಬಳೆಗಳು ಎಂದರೆ ಒಂದು ಕೈ ಹೆಚ್ಚಿಗೆ ಪ್ರೀತಿ.

ಅದೊಂದು ಕಾಲವಿತ್ತು. ಬಳೆಗಾರ ಬರುವ ಎಂದು ಮನೆಯ ಹೆಂಗಳೆಯರು ಆತನ ದಾರಿಯನ್ನು ಕಾಯುತ್ತಾ ಕುಳಿತಿರುತ್ತಿದ್ದರು. ಹದಿನೈದು ದಿನಕ್ಕೊಮ್ಮೆ ಬರುವ ಬಳೆಗಾರನಲ್ಲಿ ಅದೆಷ್ಟೊ ತರಹೇವಾರಿ ಬಳೆಗಳು ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯರ ತನಕ ಎಲ್ಲರನ್ನು ಆಕರ್ಷಿಸುತಿತ್ತು. ಇಂದಿನ ಆನ್‌ಲೈನ್ ವಹಿವಾಟಿನಂತೆ ಅಂದು ಮನೆಯ ಬಾಲಿಗೆ ಬರುವ ವಸ್ತು ಎಂದರೆ ಅದು ಬಳೆ ಮಾತ್ರ. ಬಳೆಗಳನ್ನು ಹೊತ್ತು ತರುವನು ಬಳೆಗಾರ ಮನೆಯ ಜಗುಲಿಯಲ್ಲಿ ಎಲ್ಲಾ ಬಳೆಗಳನ್ನು ಹರವಿಟ್ಟು, ನಮ್ಮಲ್ಲಿಯೆ ಯಾವ ಬಳೆ ಬೇಕು ಎಂದು ಆರಿಸಲು ಹೇಳಿ ಬಳೆಗಳನ್ನು ಒಂದೊಂದಾಗಿಯೆ ತೆಗೆದಿಡುತ್ತಿದ್ದ. ಮನೆಯ ಯಜಮಾನತಿ ಮನೆ ಮಂದಿ, ಮನೆಯ ಕೆಲಸದಾಕೆ ಎಲ್ಲರನ್ನು ಕರೆದು 'ಬಳೆಗಾರ ಬಂದಿದ್ದಾನೆ, ಬನ್ನಿ ಬಳೆ ಖರೀದಿಸಿ' ಎಂದು ಆಕೆ ಕೂಗಿ ಕರೆಯುತ್ತಿದ್ದಳು. ಗಟ್ಟಿಬಳೆಗಳನ್ನು ಕೈಯಿಂದ ಮೊಣಕೈ ತನಕ ಬಳೆಗಳ ಲೆಕ್ಕವಿಲ್ಲದೇ ತೊಟ್ಟುಕೊಳ್ಳುತ್ತಿದ್ದರು. ಬಳೆಗಾರನ ಪ್ರೀತಿ ಹಾಗೂ ಅವನು ತೊಡಿಸುತ್ತಿದ್ದ ರೀತಿಯ ಮುಂದೆ ಬಳೆಗಳ ಬೆಲೆಯೂ ನಗಣ್ಯ.

ಶ್ರಾವಣ ಮಾಸ ಬಂತೆಂದರೆ ಬಳೆಗಳಿಗೆ ಹೊಸತನದ ಛಾಯೆ. ಕೈ ತುಂಬಾ ಬಳೆಗಳನ್ನು ಇಡಲು ಒಂದೇ ತೆರನಾದ ಬಳೆಗಳನ್ನು ಖರೀದಿಸುವುದು ಒಂದು ಕಡೆಯಾದರೆ ಹಬ್ಬ, ಶಾಸ್ತ್ರ, ಸಂಪ್ರದಾಯಕ್ಕಾಗಿಯೇ ಬಳೆಯನ್ನು ಖರೀದಿಸುವುದು ಇನ್ನೊಂದು ಕಡೆ. ಪ್ರಮುಖವಾಗಿ ಗಾಜಿನ ಬಳೆಗಳನ್ನು ಹಬ್ಬಗಳಲ್ಲಿ ಬಳಸುತ್ತಾರೆ. ವರಮಹಾಲಕ್ಷ್ಮಿ, ಗೌರಿ ಹಬ್ಬಗಳಂದು ಹೆಂಗಸರು ಬಾಗಿನವನ್ನು ನೀಡಲು ಹಸಿರು ಬಳೆಗಳನ್ನು ಇಡುತ್ತಾರೆ. ಬಣ್ಣ ಬಣ್ಣದ ಬಳೆಗಳಿಗೆ ಎಲ್ಲಿಲ್ಲದ ಬೇಡಿಕೆ. ಹಸಿರು ಬಳೆಗಳ ವಿಶೇಷವೇನೆಂದರೆ ಇದು ಸಮೃದ್ಧಿಯ ಸಂಕೇತ.

'ಹಸಿರು ಗಾಜಿನ ಬಳೆಗಳೆ, ಸ್ತ್ರೀ ಕುಲದ ಶುಭ ಸ್ವರಗಳೆ...' ಎಂಬ ಹಾಡು ಕಿವಿಯಲ್ಲಿ ಗುನುಗುತ್ತಾ ಇದೆ. ಬಳೆಗಳ ಸ್ವರವನ್ನು ಸ್ತ್ರೀ ಕುಲದ ಸೊಬಗಿನೊಂದಿಗೆ ಸಮೀಕರಿಸಿದ್ದಾರೆ ಕವಿಗಳು. ಸ್ತ್ರೀ ಕುಲಕ್ಕೆ ಬಳೆಗಳು ಮಂಗಳಕರ ಸೂಚನೆಯಾಗಿದ್ದರಿಂದ ಬಳೆಗಳನ್ನು ಹಾಕುವ ರೂಢಿ ಬಂದಿದೆ. ಬಳೆಗಳನ್ನು ಹಾಕಿಕೊಳ್ಳಲು ಶಾಸ್ತ್ರ ಸಂಪ್ರದಾಯ ಎಂಬುದೊಂದು ಕಡೆಯಾದರೆ ವೈಜ್ಞಾನಿಕ ಕಾರಣವೂ ಅದರಲ್ಲಿ ಸೇರಿದೆ. ಮಣಿಕಟ್ಟಿನ ಮೇಲೆ ಬಳೆಗಳನ್ನು ಧರಿಸುವುದರಿಂದ ಬಳೆಗಳ ಘರ್ಷಣೆಯಿಂದ ರಕ್ತ ಪರಿಚಲನೆಯು ಸರಿಯಾಗಿ ಉಂಟಾಗುತ್ತದೆ ಎನ್ನುವುದು ಪ್ರಮುಖ ಕಾರಣವಾಗಿದೆ. ಸೀಮಂತದ ಸಂದರ್ಭದಲ್ಲಿ ಬಳೆಗಳನ್ನು ನೀಡುವುದು ರೂಢಿಯಲ್ಲಿದೆ. ಅದಕ್ಕೆ ಕಾರಣ ಮಗುವು ಬಳೆಗಳ ಸದ್ದನ್ನು ಆಲಿಸುತ್ತದೆ ಹಾಗೂ ಅದರಿಂದ ಮಗುವಿನ ಬೆಳವಣಿಗೆಯ ಮೇಲೆ ಸಕಾರಾತ್ಮಕವಾದ ಪರಿಣಾಮ ಬೀರುತ್ತದೆ ಎಂಬುದೂ ಒಂದಾಗಿದೆ.

ಗಾಜಿನ ಬಳೆಗಳಲ್ಲಿಯೂ ಹೊಸತನವನ್ನು ಕಾಣಬಹುದು. ಅದರಲ್ಲಿ ಚುಕ್ಕಿ ಬಳೆ, ಕಚ್ಚಿನ ಬಳೆ, ಸಾಮಾನ್ಯ ಬಳೆ... ಹೀಗೆ ಗಾಜಿನ ಬಳೆಗಳಲ್ಲಿ ಇಂತಹ ಹೊಸ ಟ್ರೆಂಡ್‌ಗಳು ಚೆಂದ. ಬಳೆಯ ನಾದದಿಂದ ಬಳೆಗಳ ಮೇಲೆ ಅದೇನೋ ಹೆಚ್ಚು ವ್ಯಾಮೋಹ ಝುಣ್ ಝುಣ್ ಸದ್ದು ಕಿವಿಗೆ ತಾಗುತಿದ್ದರೆ ಮನಸ್ಸು ಕುಣಿದಾಡುತ್ತದೆ.

ಇಂದು ಹೆಚ್ಚು ಬಳೆಗಳು ಕೈಗಳಿಗೆ ಹಾಕಿಕೊಳ್ಳುವುದಕ್ಕಿಂತ ಹಬ್ಬ ಸಮಾರಂಭಗಳಲ್ಲಿ ನೀಡುವುದಕ್ಕಾಗಿಯೇ ಹೆಚ್ಚು ಬಳಕೆಯಾಗುತ್ತಿದೆ. ವರಮಹಾಲಕ್ಷ್ಮಿ ಹಬ್ಬ ಬಂತೆಂದರೆ ಹಸಿರು ಬಳೆಗಳು ಮಾರುಕಟ್ಟೆಯಲ್ಲಿ ಹಾಗೂ ಮನೆಗಳಲ್ಲಿ ಸದ್ದನ್ನು ಮೂಡಿಸುತ್ತದೆ.

ಕಾಲ ಬದಲಾದಂತೆ ಗಾಜಿನ ಬಳೆಗಳ ಜೊತೆಯಲ್ಲಿ ಈಗ ಮೆಟಲ್ ಬಳೆ, ತ್ರೆಡ್ ಬಳೆ, ಬೆಳ್ಳಿ ಕಡಗ, ಚಿತ್ತಾರಗಳನ್ನೊಳಗೊಂಡ ಬಳೆಗಳು ಈಗ ಮಾರುಕಟ್ಟೆಯಲ್ಲಿ ಆಧಿಪತ್ಯ ಸಾಧಿಸಿವೆ. ಹೊಸ ಹೊಸ ಟ್ರೆಂಡ್ ಈಗ ಬಳೆಗಳಲ್ಲಿಯೂ ಬಂದಿದೆ. ಚಿತ್ತವನ್ನು ತನ್ನತ್ತ ಸೆಳೆದರೂ ಬಳೆಗಾರ ತೊಡಿಸುತ್ತಿದ್ದ ಅದೇ ಗಾಜಿನ ಬಳೆಗಳು ಭಾವನಾತ್ಮಕವಾಗಿ ಎಲ್ಲರನ್ನು ಬಂಧಿಸಿದೆ. ■

